## 16

# ಪರಿಶುದ್ಧ ಗುಡಾರದ ಸಾಮ್ಯ

# (9:1-14)

ಇಬ್ರಿಯ 8ರಲ್ಲಿ, "ಉತ್ತಮವಾದ ಒಡಂಬಡಿಕೆಯ" ಕುರಿತು ಒತ್ತಿ ಹೇಳಲಾಗಿದೆ (ವಚನ 6). ಅದರಂತೆ ಯೇಸು ಸಹ ಪರಿಶುದ್ಧವಾದ ಸಾನಿಧ್ಯವಾಗಿರುವನು: ಅದ ಮನುಷ್ಯನಿಂದ ನಿರ್ಮಿತವಾಗದೆ, ದೇವರಿಂದ ನಿರ್ಮಿತವಾಗಿದೆ (ವಚನಗಳು 2; ನೋಡಿರಿ 5). ಈಗ ಅಧ್ಯಾಯ 9ರ ಆರಂಭದಲ್ಲಿ, "ಯೇಸುವೇ ಉತ್ತಮವಾದ ಸಾನಿಧ್ಯ ಎಂದು ಬರಹಗಾರನು ಪ್ರತಿಪಾದಿಸಿರುವನು." ಮೊದಲ ವಚನದ ಪ್ರಸ್ತಾಪದಲ್ಲಿ: ಮೊದಲ ಗುಡಾರ ಹಾಗೂ ಅದಕ್ಕೆ ಸಂಬಂಧಪಟ್ಟ ಆರಾಧನೆಯ ಕುರಿತು ತಿಳಿಸಲಾಗಿದೆ.

ಇಲ್ಲಿ ಗುಡಾರ ಕುರಿತ ವಿಶೇಷ ಅಧ್ಯಯನವನ್ನು ನೀಡಲಾಗಿದೆ. ಅವುಗಳಲ್ಲಿರುವ ಆಸಕ್ತಿಕರವಾದ ಸಂಗತಿಗಳನ್ನೆಲ್ಲಾ ತಿಳಿಸಲು ಸಮಯ ಸಾಲದು - ಅಥವಾ ಇಬ್ರಿಯ ಬರಹಗಾರನು ಸಹ ತಿಳಿಸಿರುವದಿಲ್ಲ (ನೋಡಿರಿ 9:5). 9:9 ನೇ ವಚನದಲ್ಲಿ ಆ ಗುಡಾರವು ಈಗಿನ ಕಾಲದವರಿಗೋಸ್ಕರ ಒಂದು *ಒಳಗಣ* ಅರ್ಥವನ್ನು ಸೂಚಿಸುತ್ತದೆ (ಒತ್ತಿ ಹೇಳಿದ್ದು ನನ್ನದು). ಇಲ್ಲಿರುವ ಸಂಕೇತ (ಸಾಮ್ಯ) "ಪಕ್ಕದಲ್ಲಿ ಇರಿಸಲಾದ" ಅಂದರೆ ಹೋಲಿಕೆಗಾಗಿ[1] ಒಂದು ವಿಚಾರವನ್ನು ಇನ್ನೊಂದರ ಬಳಿ ಇಟ್ಟಿರುವದು ಎಂಬ ಅರ್ಥ.[2] ಗ್ರಂಥಕತೃ ಪ್ರಾಪಂಚಿಕ ಸನ್ನಿಧಾನವನ್ನು ಪರಲೋಕದ ಸನ್ನಿಧಾನದ ಬಳಿಯಲ್ಲಿಟ್ಟು, ಅವೆರಡನ್ನು ಹೋಲಿಕೆ ಮಾಡಿರುವನು.

### ಒಂದು ಮಾದರಿ (ನಿದರ್ಶನ)

ಈ ಹೋಲಿಕೆಗೆ ಒಪ್ಪಿಗೆ ಸೂಚಿಸುವಂತೆ, ಪ್ರಪಂಚದ ಗುಡಾರವನ್ನ ಮೊದಲಿಗೆ ಗಮನಿಸೋಣ. ಅಧ್ಯಾಯ 8ರಲ್ಲಿ ಒಂದು ಮಾದರಿಯನ್ನು ನೀಡಲಾಗಿದೆ ಅದು ದೇವಾಲಯದ ಪ್ರತಿರೂಪವು ಛಾಯೆಯೂ ಆಗಿರುವ ಆಲಯವಾಗಿದೆ (ವಚನ 5).

#### ದೇವದರ್ಶನ ಗುಡಾರದ ವಿವರಣೆಗಳು (9:1-5)[3]

ಮೊದಲ ಐದು ವಚನಗಳಲ್ಲಿ ದೇವದರ್ಶನದ ಗುಡಾರದ ಕುರಿತ ಅನೇಕ ವಿವರಣೆಗಳನ್ನು ನೀಡಲಾಗಿದೆ. ಈ ಕೆಳಕಂಡ ಸಕಲ ಸಂಗತಿಗಳು ಆ ಗುಡಾರದಲ್ಲಿದ್ದವು:

- ಪವಿತ್ರ ಸ್ಥಳ (ವಚನ 2).[4]
- ಚಿನ್ನದ ದೀಪಸ್ತಂಭ (ವಚನ 2).
- ಸಮರ್ಪಿಸಿದ್ದ ರೊಟ್ಟಿಗಳಿದ್ದ ಮೋಜು (ವಚನ 2).
- ಅತಿ ಪವಿತ್ರ ಹಾಗೂ ಪವಿತ್ರ ಸ್ಥಳದ ನಡುವಿನ ಎರಡನೆಯ ತೆರೆ (ವಚನ 3).
- ಅತಿ ಪವಿತ್ರ ಸ್ಥಳ (ವಚನ 3).[5]
- ಚಿನ್ನದ ಧೂಪಾರತಿ (ವಚನ 4), ಅದು ಪರಿಶುದ್ಧ ಸ್ಥಳದ ತೆರೆಯ ಸಮೀಪದಲ್ಲಿತ್ತು; ಆದರೆ ಧೂಪದ ಹೊಗೆಯು ಅತಿ ಪವಿತ್ರ ಸ್ಥಳಕ್ಕೆ ಹಾಯುವ ಸಂಭವವಿದ್ದದ್ದರಿಂದ, ಆ ಯಜ್ಞವೇದಿಯ ಅತಿಪವಿತ್ರ ಸ್ಥಳಕ್ಕೆ ಸಂಬಂಧ ಪಟ್ಟಿತ್ತು ಎಂದು ಬರಹಗಾರನು ತಿಳಿಸಿರುವನು.

- ಒಡಂಬಡಿಕೆಯ ಮಂಜೂಷ ಅದಕ್ಕೆ ಸಂಬಂಧಪಟ್ಟ ವಸ್ತುಗಳು (ವಚನ 4).
- ಕೃಪಾಸನ (ದೇವ ಮಂಜೂಷದ ಮುಚ್ಚಳ) (ವಚನ 5).

ಅಧ್ಯಾಯ 8ರಲ್ಲಿ ಇತರೆ ವಿವರಣೆಗಳಿವೆ. ಈ ಎರಡು ವಸ್ತುಗಳು ಗುಡಾರದ ಹೊರಗಡೆ ಇದ್ದವು:

- ವೇದಿ (ಹಿತ್ತಾಳೆ ಹೊದಿಕೆಯನ್ನು ಹೊಂದಿದ್ದ ದೊಡ್ಡವೇದಿ) ಅದು ಗುಡಾರದ ಮುಂಭಾಗದಲ್ಲಿತ್ತು. ಇಲ್ಲಿ ಯಜ್ಞಗಳನ್ನು ಮಾಡಿ, ರಕ್ತವನ್ನು ಸುರಿಸಲಾಗುತ್ತಿತ್ತು (ವಚನಗಳು 7, 9, 11-13).
- ಹಿತ್ತಾಳೆಯ ವೇದಿ ಹಾಗೂ ಗುಡಾರದ ನಡುವೆ ಪಾತ್ರೆ ಇರಬೇಕು. ಅದು ಸಾಂಪ್ರದಾಯಿಕವಾಗಿ ಶುದ್ಧಪಡಿಸಿಕೊಳ್ಳುವ ನೀರಿನ ಪಾತ್ರೆ (ನೋಡಿರಿ ವಚನ 10).

**ವಿಧಿ ವಿಧಾನಗಳ ವಿವರಣೆ (9:6-10)**

ಪರಿಶುದ್ಧ ಸ್ಥಳದಲ್ಲಿ ಯಾಜಕನು ನೆರವೇರಿಸಬೇಕಾದ ಸಾಮಾನ್ಯ ಸೇವೆಗಳನ್ನು ಮೊದಲಿಗೆ ತಿಳಿಸಲಾಗಿದೆ (ವಚನ 6).[6] ಬರಹಗಾರನ ಪ್ರಕಾರ ಇದು ಗುರುತರವಾದ ಸಂಗತಿಯಗಿರಲಿಲ್ಲ. ಇದ ಸಹಜವಾಗಿ ತಾತ್ಕಾಲಿಕ ಸೇವೆಯಾಗಿತ್ತು (ವಚನ 8). ಇಲ್ಲಿ ಬರಹಗಾರನು ಯಾಜಕನು ವರ್ಷಕೊಂದಾವರ್ತಿ ಸಮರ್ಪಿಸುವ ಒಡಂಬಡಿಕೆಯ ಯಜ್ಞದ ಬಗ್ಗೆ ಆಧ್ಯತೆಯನ್ನು ನೀಡಿರುವನು (ವಚನ 7; ನೋಡಿರಿ ವಚನ 25).[7]

## ಸಾಮ್ಯ

**ಇತರೆ ಹೋಲಿಕೆಗಳು**

ಇಹಲೋಕ ಸಂಬಂಧವಾದ ಹಾಗೂ ಪರಲೋಕ ಸಂಬಂಧವಾದ, ಅಂದರೆ ದೈಹೀಕ ಹಾಗೂ ಆತ್ಮೀಕ ಸಂಗತಿಗಳನ್ನು ಹೋಲಿಕೆ ಮಾಡುವಾಗ ಈ ವಿಚಾರಗಳುನ್ನು ಗಮನ ದಲ್ಲಿಡೋಣ. ಇಹಲೋಕ ಹಾಗೂ ಕ್ರೈಸ್ತರ ಸಂಗತಿಗಳ ನಡುವಿನ ವಿಚಾರಗಳಲ್ಲಿ ಪ್ರಸಂಗಿಗಳು ಅನೇಕ ವರ್ಷಗಳಿಂದ ಹೋಲಿಕೆಗಳನ್ನು ಮಾಡುವಲ್ಲಿ ಚೇತನಗೊಂಡಿರುವರು.

- ಯಾಜಕರು ಪರಿಶುದ್ಧ ಸ್ಥಳವನ್ನು ಪ್ರವೇಶಿಸುವ ಮುನ್ನ ತಮ್ಮನ್ನು ಶುದ್ಧ ಪಡಿಸಿಕೊಂಡು ಹೋಗುತ್ತಿದ್ದರು. "ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳವಾಗ, ತಿಳಿ ನೀರಿನಿಂದ, ನಮ್ಮ ದೇಹಗಳನ್ನು ತೊಳಕೊಳ್ಳುತ್ತೇವೆ" (10:22).
- ಚಿನ್ನದ ದೀಪಸ್ತಂಭದ ದೀಪ ಅತಿ ಪರಿಶುದ್ಧ ಸ್ಥಳದಲ್ಲಿ ಬೆಳಕನ್ನು ನೀಡುತ್ತಿತ್ತು, "ದೇವರ ವಾಕ್ಯವು ಆತ್ಮಿಯ ಮೂಲ ಬೆಳಕಾಗಿದೆ" (4:12; ಕೀರ್ತನೆ 119:105).
- ಅತಿ ಪರಿಶುದ್ಧ ಸ್ಥಳದೊಳಗೆ ಹೋಗುವ ದೂಪವು, ಪರಲೋಕಕ್ಕೆ ಹೋಗುವ ನಮ್ಮ ಪ್ರಾರ್ಥನೆಗಳಾಗಿವೆ (ಪ್ರಕಟನೆ 5:8; 8:3, 4).

**ಪ್ರಮುಖ ಉದ್ದೇಶ**

ಹಳೇ ಒಡಂಬಡಿಕೆಯ ಗುಡಾರ ಹಾಗೂ ಕ್ರೈಸ್ತತ್ವದ ನಡುವಿನ ಹೋಲಿಕೆಯೇ ಬರಹಗಾರನ ಪ್ರಮುಖ ಉದ್ದೇಶವಾಗಿರುವದಿಲ್ಲ. ಯೇಸುವನ್ನೇ ಪ್ರಚುರಪಡಿಸಿ, ಆತನ ಮಹತ್ವವನ್ನೆ ತಿಳಿಸುವ ಉದ್ದೇಶವಾಗಿದೆ. ಏಕೆಂದರೆ ನಮ್ಮ ಮಹಾಯಾಜಕನು ಯೇಸುವೇ ಆಗಿರುವನು ...

- ಕೈಯಿಂದ ನಿರ್ಮಿತವಾದ ಗುಡಾರವನ್ನು ಯೇಸು ಪ್ರವೇಶಿಸದೆ "ಪರಲೋಕವನ್ನೆ ಪ್ರವೇಶಿಸಿದನು" (ವಚನಗಳು 11, 24).
- ಹೋತ ಹೋರಿಗಳ ರಕ್ತವನ್ನು ತಾರದೆ, ತನ್ನ ಸ್ವಂತ ರಕ್ತವನ್ನೇ ತೆಗೆದುಕೊಂಡು ಹೋದನು (ವಚನ 12).
- ಯಜ್ಞವನ್ನು ತನ್ನ ಪಾಪಕ್ಕಾಗಿ ಸುರಿಸದೆ, "ನಮ್ಮ ಪಾಪಗಳಿಗಾಗಿ ಸುರಿಸಿದನು" (ವಚನಗಳು 7:14; 4:15; 7:27).
- "ವರ್ಷಕ್ಕೆ ಒಂದಾವರ್ತಿ ತಾರದೆ" ಒಂದೇ ಸಾರಿ ಸಲ್ಲಿಸಿದನು (ವಚನಗಳು 25-28; 9:12; 10:10)!

## ಮುಖ್ಯಾಂಶ

ಪರಲೋಕ ಗುಡಾರದ ಸೇವೆಗೆ ಲೋಕ ಸಂಬಂಧದ್ದನ್ನು ಹೋಲಿಸಿರುವಲ್ಲಿ, ಬರಹಗಾರನು ಯಾವ ಅಂಶವನ್ನು ಸ್ಪಷ್ಟಪಡಿಸುತ್ತಿರುವನು?

**ನಮ್ಮ ಆರಾಧನ ಸಾನಿಧ್ಯವು ಉತ್ತಮವಾಗಿದೆ.**

ಈ ವಾಕ್ಯ ಭಾಗದಿಂದ ಅನೇಕ ಪಾಠಗಳನ್ನು ಕಲಿಯಬಹುದಾಗಿದೆ. ಅದರಲ್ಲಿ ನಮ್ಮ ಆರಾಧನ ಸಾನಿಧ್ಯವು ಉತ್ತಮವಾದದ್ದಾಗಿದೆ. ಮೊದಲನೆಯದು ಮಹಿಮೆವುಳ್ಳದ್ದಾಗಿತು. ಲೋಕ ಸಂಬಂಧವಾದ ಗುಡಾರದೊಳಿದ್ದ ಪೀಠೋಪಕರಣಗಳನ್ನು ಬಂಗಾರದ ಅಥವಾ ಬಂಗಾರದ ತಗಡಿನಿಂದ ಮಾಡಿದವುಗಳಾಗಿದ್ದವು. ಆದಾಗ್ಯೂ ನಮ್ಮದು ಮಹಿಮೆವುಳ್ಳದ್ದಾಗಿ, ಪರಲೋಕಕ್ಕೆ ಸಂಬಂಧಪಟ್ಟದ್ದಾಗಿದೆ!

**ನಮ್ಮ ಯಜ್ಞಗಳು ಉತ್ತಮವಾಗಿವೆ.**

ಪ್ರಥಮವಾಗಿ, ಬರಹಗಾರರು ನಮಗೆ ಶ್ರೇಷ್ಠವಾದ ಯಜ್ಞವಿದೆ ಎಂಬುದನ್ನು ಅರಿಯಬೇಕೆಂದು ಬಯಸುತ್ತಾರೆ.

- ಹಳೆ ಒಡಂಬಡಿಕೆಯ ಪ್ರಕಾರ ಪ್ರಾಣಿಗಳ ಯಜ್ಞವು ಅದರ ಒಂದು ಭಾಗವಾಗಿತ್ತು (ವಚನ 10), ಆದರೆ ನಮ್ಮ ಯಜ್ಞವು ಹೊಸ ಒಡಂಬಡಿಕೆಯ ಮುಖ್ಯ ಕೇಂದ್ರವೂ ಹಾಗೂ ರಕ್ಷಣೆಯೂ ಆಗಿದೆ (ವಚನ 12).
- ಪ್ರಾಣಿ ವಧೆ, ಧೈಹೀಕ ಸಂಗತಿಗೆ ಸಂಬಂಧ ಪಟ್ಟಿದ್ದರೆ (ವಚನ 13), ನಮ್ಮ ಯಜ್ಞವು ಪಾಪಗಳನ್ನು ಕ್ಷಮಿಸಿ ಮನಶುದ್ಧಿ ಮಾಡುತ್ತದೆ (ವಚನ 14).
- ಪಶುಗಳ ಯಜ್ಞದಿಂದ ತಾತ್ಕಾಲಿಕ ಶುದ್ಧತೆ ಉಂಟಾಗಿದ್ದರೆ, ನಮ್ಮ ಯಜ್ಞವು ನಿತ್ಯವಾದ ರಕ್ಷಣೆಯನ್ನು ತಂದಿರುತ್ತದೆ (ವಚನ 12).
- ಪಶುಗಳ ಯಜ್ಞವು ಒಂದು ಗುಂಪಿಗೆ (ಯೆಹೂದ್ಯರಿಗೆ) ಮಾತ್ರ ಮೀಸಲಾಗಿದ್ದರೆ, ನಮ್ಮ ಯಜ್ಞವು "ಮನುಷ್ಯರೆಲ್ಲರಿಗೆ" ಮೀಸಲಾಗಿದೆ (2 ಕೊರಿಂಥ 5:15).

**ನಮ್ಮ ಸೇವೆಯು ಉತ್ತಮವಾಗಿರಬೇಕು.**

ಇದು ಸತ್ಯ ಸಂಗತಿಯಾಗಿರುವದರಿಂದ, ನಮ್ಮ ಸೇವೆಯು ಸಹ ಉತ್ತಮವಾಗಿರಬೇಕು: ವಚನ 14ರ ಈ ಮಾತುಗಳನ್ನು ಮರೆಯಬೇಡಿರಿ "ಕ್ರಿಸ್ತನ ರಕ್ತವು" ಅದು ಮನಶುದ್ಧಿ ಮಾಡಿ, ಜೀವವುಳ್ಳ ... *ದೇವರನ್ನು ಸೇವಿಸುವಂತೆ* ಮಾಡುತ್ತದೆ (ಒತ್ತಿ ಹೇಳಿದ್ದು ನನ್ನದು). ಸೇವೆ ಮಾಡುವದಕ್ಕಾಗಿ ರಕ್ಷಿಸಲ್ಪಟ್ಟಿದ್ದೇವೆ! ಮುಂದಿನ ಅಧ್ಯಾಯನಲ್ಲಿ (ವಚನ 19), "ಉತ್ತೇಜನದ ದೀರ್ಘ ಮಾತನ್ನು" ಬರಹಗಾರನು ತಿಳಿಸಿರುವನು.

## ಬೋಧಕರಿಗಾಗಿ ಟಿಪ್ಪಣಿ

ಹಲವು ಕಾರಣಗಳಿಂದ ದೇವಾಲಯದ ಬದಲು, ದೇವದರ್ಶನದ ಗುಡಾರ ಎಂದು ಬರಹಗಾರನು ಬಳಸಿರುವನು. ಗುಡಾರವು ಚಲಿಸುತ್ತಿತ್ತು, ಆದರೆ ದೇವಾಲಯವು ದೃಢವಾದದ್ದಾಗಿತ್ತು. ಗುಡಾರ ಮತ್ತು ಅದರ ಸೇವೆಯ ಕುರಿತು ತಿಳಿಯಬಯಸಿದರೆ (ವಿಮೋಚನಕಾಂಡ 35-40; ನೋಡಿರಿ).

ಟಿಪ್ಪಣಿಗಳು

[1]NIV ಯು ಈ ಪದವನ್ನು "ದೃಷ್ಟಾಂತವೆಂದು" ಭಾಷಾಂತರಿಸಲಾಗಿದೆ, ಆದರೆ J. B. Phillips' "ಚಿತ್ರವೆಂದು" ಭಾಷಾಂತರಿಸಿದರು. [2]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* [Nashville: Thomas Nelson Publishers, 1985], 457. [3]ಪರಿಶುದ್ಧ ಗುಡಾರದ ಚಿತ್ರವನ್ನು ನೋಡಿ. [4]ವಚನ 6ರಲ್ಲಿ ಪರಿಶುದ್ಧ ಸ್ಥಳವನ್ನು "ಹೊರ [ಅಕ್ಷರದಾರ್ಥವಾಗಿ, 'ಮೊದಲನೆಯ'] ಗುಡಾರ." [5]ವಚನ 7ರಲ್ಲಿ ಅತಿ ಪರಿಶುದ್ಧ ಸ್ಥಳವನ್ನು "ಎರಡನೇಯ" ಗುಡಾರವೆಂದು ಸೂಚಿಸಲಾಗಿದೆ. [6]ಪರಿಶುದ್ಧ ಸ್ಥಳದಲ್ಲಿರುವ ವಸ್ತುಗಳನ್ನು ಯಾಜಕರು ಏನು ಮಾಡಿದರು ಎಂಬುದನ್ನು ಹೇಳಿರಿ. [7]ಆ ದಿನ ನಡೆದವುಗಳೆಲ್ಲವನ್ನು ಪುನರ್ವಿಮರ್ಶಿಣೆ ಮಾಡಿ. "ವರ್ಷಕೊಂದಾವರ್ತಿ" ಎಂದರೆ "ವರ್ಷದಲ್ಲಿ ಒಂದು ದಿವಸ." ಆ ದಿವಸ ಮಹಾಯಾಜಕನು ಕನಿಷ್ಟಪಕ್ಷ ಮೂರು ಸಾರಿ ಅತಿ ಪರಿಶುದ್ಧ ಸ್ಥಳದೊಳಗೆ ಹೋಗುವವನು.

## ದೇವದರ್ಶನದ ಗುಡಾರದಲ್ಲಿ ಆರಾಧನೆಗಾಗಿ ಬಳಸಿದ ವಸ್ತುಗಳು

